

## ಆಪರೇಷನ್ ಇಸ್ಲಾಮಿಕ್ ಸ್ಟೇಟ್

ಫೆ. 13ರ ಸಂಚಿಕೆಯಲ್ಲಿ ಪ್ರಕಟವಾದ ‘ಆಪರೇಷನ್ ಇಸ್ಲಾಮಿಕ್ ಸ್ಟೇಟ್’ ಲೇಖನ (ನಿರೂಪಣೆ: ರಾಘವೇಂದ್ರ ಕೆ. ಚಿತ್ರಗಳು: ಭಾನುಪ್ರಕಾಶ ಚಂದ್ರ) ನಿಜಕ್ಕೂ ಭಯಾನಕವಾಗಿತ್ತು. ಅಂತಹ ಸ್ಥಳಕ್ಕೆ ಧೈರ್ಯವಾಗಿ ಹೋಗಿ ಬಂದು ಅಲ್ಲಿನ ವಾಸ್ತವಾಂಶದ ವರದಿಯನ್ನು ಚಿತ್ರಸಹಿತ ನೀಡಿದ ಪತ್ರಕರ್ತರಿಗೆ ನಮ್ಮದೊಂದು ಸಲಾಂ ಹೇಳಲೇಬೇಕು.

—ಪುಷ್ಪಾಶ್ರೀರಾಮ್, ಬೆಂಗಳೂರು

## ವೈರುಧ್ಯದ ಲೇಖನಗಳು

ಫೆ 20ರ ಸಂಚಿಕೆ ಎರಡು ವೈರುಧ್ಯ ಲೇಖನಗಳ ಸಂಗಮವಾಗಿತ್ತು. ಒಂದು ಕಡೆ ದಕ್ಷಿಣ ಕನ್ನಡ ಜಿಲ್ಲೆಯ ಸಾವಯವ ಕೃಷಿಕ ಎ.ಪಿ.ಸದಾಶಿವ (‘ಹಸಿರು ಧ್ಯಾನಕ್ಕೆ ಹುಲುಸಾದ ಗುಡ್ಡ’. ಲೇ: ನಾ. ಕಾರಂತ ಪೆರಾಜೆ) ಅವರು ಬೋಳು ಗುಡ್ಡವನ್ನು ಕಾಡಾಗಿಸಿದ್ದಾರೆ. ಇನ್ನೊಂದು ಕಡೆ ತನ್ನ ಹುಚ್ಚುತನಗಳನ್ನೇ ಸಾಹಸವೆಂದು ಬಿಂಬಿಸಿಕೊಂಡು (‘ಕಾಡು ಮೇಡು ಮತ್ತು ಬೇರ್ ಗ್ರಿಲ್ಸ್’ ಲೇ: ಪೃಥ್ವಿರಾಜ್) ಕಾಡಿನೊಳಗೆ ಸೆಲೆಬ್ರಿಟಿಗಳನ್ನು ಕರೆದೊಯ್ದು ಚಿತ್ರೀಕರಿಸಿ ಹಣ ಮಾಡಿಕೊಳ್ಳುವ ವ್ಯಕ್ತಿಯೂ ಇದ್ದಾರೆ. ಇಂಥವರ ಹಿಂದೆ ಕಾಡು ಸುತ್ತಲು ಹೊರಡುವ ಸೆಲೆಬ್ರಿಟಿಗಳು, ಇದಕ್ಕೆ ಅವಕಾಶ ಮಾಡಿಕೊಡುವ ಅರಣ್ಯ ಇಲಾಖೆಯೂ ಇನ್ನಾದರೂ ಬದಲಾಗಲಿ. ಯಾವ ಅಪೇಕ್ಷೆಯೂ ಇಲ್ಲದೆ ಪರಿಸರ ಸಂರಕ್ಷಣೆಯಲ್ಲಿ ತೊಡಗಿರುವ ಎಲೆಮರೆಯ ಕಾಯಿಯಂತಿರುವವರನ್ನು ಗುರುತಿಸಿ ಪ್ರೋತ್ಸಾಹಿಸಲಿ.

—ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ

## ಸಾಹಸಿ ಬೇರ್ ಗ್ರಿಲ್ಸ್

ಫೆ. 20ರ ಸಂಚಿಕೆಯಲ್ಲಿ ಖ್ಯಾತನಾಮರೊಂದಿಗೆ ದಟ್ಟ ಅರಣ್ಯಗಳಲ್ಲಿ ಹೆಜ್ಜೆ ಹಾಕುವ, ಸೆಲೆಬ್ರಿಟಿಗಳೊಂದಿಗೆ ಕಾಡುಮೇಡು ಸುತ್ತುವ, ಗಿನ್ನಿಸ್ ವಿಶ್ವದಾಖಲೆ ಪುಸ್ತಕದಲ್ಲಿ ತಮ್ಮ ಹೆಸರು ಬರೆಸಿಕೊಂಡಿರುವ, ಅನೇಕ ಗೌರವ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ, ವರ್ಣರಂಜಿತ ವ್ಯಕ್ತಿತ್ವದ ಬೇರ್ ಗ್ರಿಲ್ಸ್‌ರ ಸಾಹಸ ಯಾನವನ್ನು ಪೃಥ್ವಿರಾಜ್ ಸೊಗಸಾಗಿ ಪರಿಚಯಿಸಿದ್ದಾರೆ.

—ಪಿ. ಜಯವಂತ ಪೈ, ಕುಂದಾಪುರ

## ಸಿಹಿ ನೆನಪು

ಸವಿ ಸವಿ ನೆನಪಿನ, ‘ಮನೆಗೆ ಬಂದ ಜಾನಪದ ಜಂಗಮ’ (ಫೆ. 20), ನನಗೆ 1950ರ ದಶಕದಲ್ಲಿ ಎಸ್.ಕೆ. ಕರೀಂಖಾನ್‌ರವರು ನನ್ನ ಹುಟ್ಟೂರಾದ ದೊಡ್ಡಬಳ್ಳಾಪುರಕ್ಕೆ ಬಂದು ಮುಖ್ಯರಸ್ತೆಯ (ಈಗಿನ ಕೊಂಗಾಡಿಯಪ್ಪ ರಸ್ತೆ) ಅರಳಿಕಟ್ಟೆಯ ಮೇಲೆ ಸಾಯಂಕಾಲ ಜನಪದ ಕವಿತೆಗಳನ್ನು ಹಾಡಿ ನಮಗೆ ಚೈತನ್ಯವನ್ನು ತುಂಬಿದ್ದು ಜ್ಞಾಪಕಕ್ಕೆ ತಂದಿತು. ಕಲೆಗೆ ಅವರ ಸಿರಿ ಕೊಡುಗೆ, ಬಡತನದ ಬೇಗೆಯಲ್ಲೂ ಒಂದು ಅತ್ಯದ್ಭುತದ ಅನನ್ಯ ಸಾಧನೆ! ಅದನ್ನು ನಾವು ಎಂದಿಗೂ ಮರೆಯಬಾರದು.

—ಎಸ್.ಆರ್. ದೇವಪ್ರಕಾಶ್, ತುಮಕೂರು

## ಮದಗದ ಮರೆವು; ಉಡುಪಿ ದಣಿವು

ಫೆ. 20ರ ಸಂಚಿಕೆಯಲ್ಲಿ ಶ್ರೀ ಪಡ್ರೆ ಬರೆದಿರುವ ಮದಗಗಳ ಪುನರುಜ್ಜೀವನದ ಬಗೆಗಿನ ಲೇಖನ ತುಂಬ ಚೆನ್ನಾಗಿತ್ತು. ಬಾಲ್ಯದಲ್ಲಿ, ಬೇಸಿಗೆ ಕಾಲದವರೆಗೆ ಹರಿಯುವ ತೋಡಿನ ಬದಿಯಲ್ಲಿ ಬೆಳೆದ ನಮಗೆ ಆ ದಿನಗಳ ಹಾಗೆ ಹರಿಯುವ ನೀರನ್ನು ನೋಡುವ ಭಾಗ್ಯ ಇಲ್ಲವಲ್ಲ ಎಂದು ಬೇಸರವಾಗುತ್ತದೆ. ತೋಡಿಗೆ ನೀರುಣಿಸುವ ಮದಗಗಳೆಲ್ಲಾ ಅತಿಕ್ರಮಣಗೊಳಗಾಗಿ ಮಳೆಬಂದಾಗ ಮಾತ್ರ ತುಂಬಿಕೊಳ್ಳುವ ಪರಿಸ್ಥಿತಿ ಈಗ ಉಂಟಾಗಿದೆ. ಹಳೆಯ ಮದಗಗಳನ್ನು ಹುಡುಕಿ ಅವುಗಳಿಗೆ ಜೀವ ಕೊಟ್ಟರೆ ಕರಾವಳಿಯಲ್ಲಿ ಜಲ ಸಂಪನ್ಮೂಲ ವೃದ್ಧಿಯಾಗಿ ಬೇಸಗೆಯಲ್ಲಿ ನೀರಿಗಾಗಿ ಬವಣೆಪಡುವುದು ಕಮ್ಮಿಯಾಗಬಹುದು.

—ಮಾಧವ ಉದ್ಯಾವರ, ಮೈಸೂರು

## ಪ್ರೇಮ ಪುರಾಣ ಮತ್ತು ಲವ್ ಜಮಾನ

ಫೆ. 20ರ ಸಂಚಿಕೆಯಲ್ಲಿ ಪದ್ಮನಾಭ ಭಟ್ ಬರೆದಿರುವ ‘ಹಳೆ ಪ್ರೇಮ ಪುರಾಣ ವರ್ಸಸ್ ಹೊಸ ಲವ್ ಜಮಾನ’ ಲೇಖನ ಚಿಂತನೆಗೆ ಇಂಧನವಾಗಿತ್ತು. ಪ್ರೀತಿ (Love) ಎಂಬ ಪದವನ್ನು ಅಪಾರ್ಥ ಮಾಡಿಕೊಂಡವರೇ ಹೆಚ್ಚು.



ಪ್ರೇಮ, ವಾತ್ಸಲ್ಯ, ಮಮತೆ, ಅನುರಾಗ, ಪ್ರಣಯ, ಒಲವು ಮುಂತಾದ ಭಾವನೆಗಳನ್ನು ‘ಪ್ರೀತಿ’ಯೆಂದೇ ಕರೆಯುವುದು ವಾಡಿಕೆ. ಆದರೆ ವಾಸ್ತವ ಮಾತ್ರ ಬೇರೆ. ತಾಯಿ – ಮಗು, ಗುರು ಶಿಷ್ಯ, ಪ್ರೇಯಸಿ ಪ್ರಿಯಕರ, ಸಹೋದರ ಸಹೋದರಿ, ಗಂಡ ಹೆಂಡತಿ ಮತ್ತು ಗೆಳೆಯ – ಗೆಳತಿ ಇವರ ನಡುವಿನ ಸಂಬಂಧಗಳನ್ನು ‘ಪ್ರೀತಿ’ ಎಂಬ ಅಮೂರ್ತ ನಾಮಪದದಿಂದ ಕರೆದರೂ ಆ ಸಂಬಂಧಗಳಲ್ಲಿ ಬೆಸೆದಿರುವ ಒಳಸೆಳೆತಗಳು, ಒಳಕವಲುಗಳು ಹಾಗೂ ಒಳಾರ್ಥಗಳು ಭಿನ್ನ. ಯಾವುದೇ ಸಂಬಂಧಗಳಲ್ಲಿ ವ್ಯಕ್ತಿಗಳು ಸ್ವ – ಹಿತನನ್ನು ಬದಿಗಿಟ್ಟು ಪರಹಿತಕ್ಕಾಗಿ ತಮ್ಮ ಸರ್ವಸ್ವವನ್ನು ಬರಿದು ಮಾಡಿಕೊಳ್ಳುವ ಪ್ರಕ್ರಿಯೆಯೇ ‘ಪ್ರೀತಿ’ಯೆಂಬ ನೈಜಭಾವದ ಜೀವಾಳ.

—ಫಾ. ಎಡ್ವರ್ಡ್ ರೊಡ್ರಿಗಸ್ ಎಸ್. ಜೆ., ಬೆಂಗಳೂರು

## ಸರಳ ವಿವಾಹ ಅನುಕರಣೀಯ

ಫೆ. 20 ರ ಸಂಚಿಕೆಯಲ್ಲಿ ಎನ್. ಉದಯಕುಮಾರ್ ಅವರು ‘ನಿಮ್ಮೊಡನೆ’ ಪುಟದಲ್ಲಿ ‘ಮದುವೆ, ಸಾಲ, ಸರಳ ವಿವಾಹ...’ದಲ್ಲಿ ಹೇಳಿರುವಂತೆ ದೇಶದಲ್ಲಿ ಅದ್ದೂರಿ ವಿವಾಹಗಳು ಸಹ ಜನರು ಸಾಲಗಾರರಾಗಲು ಒಂದು ಕಾರಣವೆಂಬುದು ಸತ್ಯ. ಇತ್ತೀಚೆಗೆ ನಡೆದ ಸಿನಿಮಾ ನಟ ಚೇತನ್ ಅವರು ಸರಳ ವಿವಾಹ ಅನುಕರಣೀಯ. ಜನರು ಇನ್ನಾದರೂ ಆಡಂಬರದ ವಿವಾಹವಾಗಬೇಕು ಎಂಬ ಮನಸ್ಥಿತಿಯಿಂದ ಹೊರಬರಬೇಕಿದೆ.

—ದೆಗ್ಗನಹಳ್ಳಿ ಆನಂದ್, ಕೆ.ಆರ್.ನಗರ

## ಆ್ಯಸಿಡ್ ದಾಳಿ

ಫೆ.6ರ ಸಂಚಿಕೆಯಲ್ಲಿ ಪ್ರಕಟವಾದ (ಲೇ: ಮಹತಿ) ‘ನಗೆ ಹೂವು ಬಾಡದಿರಲಿ’ ಲೇಖನ ಓದಿಸಿಕೊಂಡು ಹೋಯಿತು. ತಲೆಬರಹದ ತಾಕತ್ತು ಅಂಥದ್ದು. ಅಲ್ಲಿರುವ ಕಥೆಗಳಲ್ಲಿನ ಅಸಾಮಾನ್ಯರ ಅಪಾರ ಆತ್ಮಸ್ಥೈರ್ಯದ ಶಕ್ತಿಯಿಂದ ಹುಟ್ಟಿದ ಸಾಲು ಅದು. ಅದಕ್ಕಿರುವ ಶಕ್ತಿ ಅಪರಿಮಿತ.

ಒಳಗಿರುವ ಒಂದೊಂದು ನೋವಿನ ಕಥೆ, ಸಮಾಜದ ಬಿಡಿ, ಸ್ವಂತ ಕುಟುಂಬದ ಸ್ಥೈರ್ಯವೂ ಇಲ್ಲದ ಹೆಣ್ಣು ಜೀವಗಳ ಪರಿಸ್ಥಿತಿ, ನನ್ನ ಸುತ್ತಲಿನ ಜೀವಗಳೆಲ್ಲ ಕಣ್ಣ ಮುಂದೆ ಬಂದರು. ಆರ್ದ್ರವಾಯಿತು ಕಣ್ಣಂಚು, ಆಳವಾಗಿ ನಾಟಿದ್ದು ಮನಸಿಗೆ. ಎಂತಹ ಶತ್ರುವಿಗೂ ಬೇಡ ಅನಿಸುವ ಸ್ಥಿತಿ, ದುರದೃಷ್ಟವಶಾತ್ ಘಟಿಸಿ ಹೋದಲ್ಲಿ ಏನು ಮಾಡಬೇಕು ಅನ್ನುವ ಎಲ್ಲಾ ಅಂಜು ಮನಸುಗಳಿಗೆ ಇಲ್ಲಿ ಇನ್ನಷ್ಟು ಭಯ ಹುಟ್ಟಿಸಿದರೂ ಜೊತೆಗೆ ಭರವಸೆ ಕೂಡಾ ಇದೆ. ಇತ್ತೀಚೆಗೆ ಇಂತಹ ಪ್ರಕರಣಗಳು ಬೆಳಕಿಗೆ ಬಂದ ನಗರಗಳಲ್ಲಿ ನನ್ನೂರು ಇದ್ದದ್ದು, ದೊಡ್ಡ ಆಘಾತ!

ವಸ್ತುವೇ ಅಷ್ಟು ಪರಿಣಾಮಕಾರಿಯಾಗಿದೆ. ಹೆದರಿಸಿದಷ್ಟೇ ಜಾಗರೂಕರನ್ನಾಗಿಸುವ ಬರಹ.

—ಹರಿ, ಚಿತ್ರದುರ್ಗ

ಫೆ. 20 ರ ಸಂಚಿಕೆಯಲ್ಲಿ ‘ಮದಗ ಮರೆತು ಸೋತ ಉಡುಪಿ’ (ಲೇ: ಶ್ರೀ ಪಡ್ರೆ) ಲೇಖನದಲ್ಲಿನ ಈ ಚಿತ್ರದಲ್ಲಿ ಇರುವವರು ಶಂಭುಶಂಕರ ರಾವ್. ಈ ಹೆಸರು ಪ್ರಕಾಶ್ ಶೆಟ್ಟಿ ಎಂದು ತಪ್ಪಾಗಿ ಪ್ರಕಟವಾಗಿತ್ತು.



—ಸಂ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in